ದಿನಾಂಕಃ 16.07.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಪಾಟೀ ಸವಾಲುಃ 6 ರಿಂದ 12 ನೇ ಪ್ರತಿವಾದಿಗಳ ಪರ ಶ್ರೀ. ಕೆ.ಟಿ.ಟಿ., ವಕೀಲರಿಂದಃ

1. ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮಗೂ ಕರಿಯಯ್ಯನವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಕರಿಯಯ್ಯ ಯಾವಾಗ ಮರಣಹೊಂದಿದರು ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ಅವರ ಮರಣ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಸದರಿ ಕರಿಯಯ್ಯನ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಅವರು ಯಾವಾಗ ಮರಣ ಹೊಂದಿದರು ನನಗೆ ಗೊತ್ತಿಲ್ಲ. ಸದರಿ ಕರಿಯಯ್ಯ ಮರಣದ ನಂತರ ಒಟ್ಟು ಕುಟುಂಬದ ನಿರ್ವಹಣೆಯನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು. ಕರಿಯಯ್ಯನ ಮಕ್ಕಳಲ್ಲಿ ಲಿಂಗಮ್ಮ ಎಂಬುವವರು ಕುಟುಂಬದ ನಿರ್ವಹಣೆ ನೋಡಿಕೊಳುತ್ತಿದ್ದರು. ಸದರಿ ಲಿಂಗಮ್ಮ ಅಪ್ಪಕೆರೆಯಲ್ಲಿ ವಾಸವಾಗಿದ್ದರು. ಸದರಿ ಲಿಂಗಮ್ಮರವರು ಅಪ್ಪಕೆರೆಯಲ್ಲಿ ವಾಸವಾಗಿದ್ದ ಬಗ್ಗೆ ಮತ್ತು ಕುಟುಂಬದ ನಿರ್ವಹಣೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

2. ನಿಪಿ 1 ನ್ನು ಕರಿಯಯ್ಯನವರು ಬೋರಮ್ಮನಿಗೆ ಬರೆದುಕೊಟ್ಟಿರುವ ಬೋಗ್ಯ ಪತ್ರ. ಸದರಿ ನಿಪಿ 1 ರ ಅಸಲು ಪತ್ರ ನಮ್ಮ ಬಳಿ ಇತ್ತು. ಸದರಿ ಪತ್ರವನ್ನು ನನ್ನ ತಾಯಿ ಪುಟ್ಟಮ್ಮ ರವರು ನನಗೆ ನೀಡಿದರು. ನಿಪಿ 1 ಬೋಗ್ಯಪತ್ರ ಬಿಡುಗಡೆ ಆದ ಸಮಯದಲ್ಲಿ ನಮ್ಮ ತಾತಾ ಕರಿಯಯ್ಯ ಬದುಕಿದ್ದರು. ನಮ್ಮ ತಾತಾ ಜೀವಂತ ಇರುವವರೆಗೂ ಅವರೇ ಮನೆಯ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

3. ವಾದಿಗಳು ಎಲ್ಲರೂ ಚರ್ಚ್ ರಸ್ತೆಯಲ್ಲಿ ವಾಸವಿರುವುದಾಗಿ ನಮೂದು ಮಾಡಿದ್ದೇವೆ. ನಮ್ಮ ತಾತಾ ಕರಿಯಯ್ಯ ಮೂಲತಃ ಅಪ್ಪಗೆರೆಯವರು. ಸದರಿಯವರಿಗೆ ಅಲ್ಲಿ ಮನೆ ಸಹ ಇದೆ. ಪ್ರಸ್ತುತ ಸದರಿ ಮನೆಯಲ್ಲಿ 1 ನೇ ಪ್ರತಿವಾದಿ ವಾಸವಾಗಿದ್ದಾರೆ. ಅದಕ್ಕೂ ಮೊದಲು ಲಿಂಗಮ್ಮರವರು ವಾಸವಾಗಿದ್ದರು. ನಮ್ಮ ತಾತಾ ಕರಿಯಯ್ಯರವರು ಸಹ ಅದೇ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಆ ಸಮಯದಲ್ಲಿ ಸದರಿ ಮನೆಯಲ್ಲಿ ಲಿಂಗಮ್ಮ ಮತ್ತು ಅವರ ಮಕ್ಕಳು ವಾಸವಾಗಿದ್ದರು ಎಂದರೆ ಸರಿ. ಬೋಗ್ಯ ಬಿಡುಗಡೆ ಆದ ವಿಚಾರ ನನಗೆ ಗೊತ್ತು. ನಿಪಿ 1 ಬೋಗ್ಯ ಬಿಡುಗಡೆ ಆದ 2 - 3 ವರ್ಷಗಳ ನಂತರ ನಮ್ಮ ತಾತಾ ಕರಿಯಯ್ಯ ಮರಣ ಹೊಂದಿದರು. ನಮ್ಮ ತಾತನಿಗೆ 3 ಜನ ಹೆಣ್ಣು ಮಕ್ಕಳು ಎಂದರೆ ಸರಿ. ನಮ್ಮ ತಾತ ಮರಣ ಹೊಂದುವುದಕ್ಕೂ ಮೊದಲೇ ನಮ್ಮ ಅಜ್ಜಿ ಮರಣ ಹೊಂದಿದ್ದರು.

4. ದಿಃ 23.06.1978 ರಲ್ಲಿ ನಮ್ಮ ತಾಯಿ ಮರಣ ಹೊಂದಿರುತ್ತಾರೆ. ಆ ಸಮಯದಲ್ಲಿ ನಮ್ಮ ತಾತಾ ಜೀವಂತವಾಗಿದ್ದರು ಎಂದರೆ ಸರಿ. ಸಿದ್ದಮ್ಮ ರವರು 2007 ರಲ್ಲಿ ತೀರಿಕೊಂಡಿರುತ್ತಾರೆ. ಆ ವೇಳೆಗೆ ನಮ್ಮ ತಾತಾ ಮರಣ ಹೊಂದಿದ್ದರು, ಲಿಂಗಮ್ಮರವರು 2016 ರಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರು ನಮ್ಮ ತಾತನ ಮನೆಯಲ್ಲಿಯೇ ಮರಣ ಹೊಂದಿದರು ಎಂದರೆ ಸರಿ. ದಾವಾ ಸ್ವತ್ತು ಸಂಃ 1 ರಲ್ಲಿ ಲಲಿಂಗಮ್ಮ ಮತ್ತು ಅವರ ಮಕ್ಕಳು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಾಯಿ ಜೀವಿತ ಕಾಲದಲ್ಲಿ ನನ್ನ ತಾತನನ್ನು ವಿಭಾಗ ಮಾಡಲು ಕೇಳಿರುವುದಿಲ್ಲ. ಕರಿಯಯ್ಯನವರ ಮರಣಾನಂತರ ಸಿದ್ದಮ್ಮನವರು ಸಹ ವಿಭಾಗ ಮಾಡಲು ಕೇಳಿರುವುದಿಲ್ಲ. ದಾವಾ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂಬ ಬಗ್ಗೆ ಸಿದ್ದಮ್ಮನವರಿಗೆ ಗೊತ್ತಿತ್ತು ಎಂದರೆ ಸರಿ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.